ಆಮಿಷವೊಡ್ಡಿ, ತನ್ನ ಕೊರೆತ ಕೇಳುವಂತೆ ಷರತ್ತು ವಿಧಿಸಿದ್ದಾನೆ! ಘಾಟಿ ಮುದುಕ ಅದಕ್ಕಾಗಿ ಕರಾರುಪತ್ರವೊಂದನ್ನು ಕೂಡಾ ಹೊಂದಿರಬೇಕು. ಮಾತು ಕೇಳ್ದೇ ಇದ್ರೆ ಕಾಂಟ್ರಾಕ್ಟ್ ಕ್ಯಾನ್ಸಲ್ ಅಂತ ಹಾಕಿದ್ದಾನೆ. ಬಹುಶಃ ಹಣ ಕೊಡಬೇಕೆಂಬ ಷರತ್ತು ಕೂಡಾ ಇರಬಹುದು! ಜೊತೆಗೆ ಗಮನಿಸು, ಆತ ತನ್ನ ಸಂಪರ್ಕ ಸಂಖ್ಯೆಯನ್ನು ನೀಡಿಲ್ಲ!! ಕೇವಲ ಕರೆ ಮಾಡಿ, ವಿಚಾರಿಸುವವರನ್ನು ದೂರವಿಡುವ ಉದ್ದೇಶದಿಂದ ಹಾಗೆ ಮಾಡಿರಬಹುದು. ಆಸಕ್ತರು ಅಲ್ಲಿಗೇ ಹೋಗಬೇಕು. ಏಡುಕೊಂಡಲು ತನ್ನ ಸಂಗಾತಿಯನ್ನು ಪ್ರತ್ಯಕ್ಷವಾಗಿ ಭೇಟಿಯಾದರೆ ಮಾತ್ರ ಆಯ್ಕೆ ಮಾಡುವ ಇರಾದೆ ಹೊಂದಿದ್ದಾನೆ. ಇದೊಂದು ತೀರಾ ವಿಚಿತ್ರವಾದ ಜಾಹೀರಾತು ಎನ್ನಲು ಯಾವುದೇ ಅಡ್ಡಿಯಿಲ್ಲ. ಸದ್ಯಕ್ಕಂತೂ ನಾವು ಅದರ ಬಗ್ಗೆ ತಲೆಕೆಡಿಸಿಕೊಳ್ಳೋ ಅಗತ್ಯ ಕಾಣುವುದಿಲ್ಲ. ಇಗೋ, ಬಿಸಿ ಬಿಸಿಯಾದ ಚಹಾ ಸಿದ್ಧವಾಗಿದೆ..."

ನಾನು ಆಮೇಲೆ ಆ ಜಾಹೀರಾತನ್ನು ಮರೆತೇ ಬಿಟ್ಟಿದ್ದರೂ, ಬಹಳ ಅಚ್ಚರಿಯೆನ್ನುವಂತೆ ಮೂರು ದಿನಗಳ ನಂತರ ಮತ್ತೆ ಅದನ್ನು ನೆನಪು ಮಾಡುವ ಘಟನೆಯೊಂದು ಜರುಗಿತು. ಚೆರಿಯಪರಂಬು ಕುಟ್ಟಯ್ಯ ಅನ್ನುವವನೊಬ್ಬ ನಮ್ಮನ್ನು ಕಾಣಲು ಸಂಜೆ ನಾಲ್ಕರ ಹೊತ್ತಿಗೆ ಆಗಮಿಸಿದ. ದಪ್ಪ ಮೀಸೆ, ಬಿಗಿದ ಮೊಗದ ಕುಟ್ಟಯ್ಯ ಮೇಲುನೋಟಕ್ಕೆ ಯಾರೊಂದಿಗೂ ಬೆರೆಯದ ಸ್ವಭಾವದವನಂತೆ ಗೋಚರಿಸಿದ.

"ನಿಮ್ಮಲ್ಲಿ ಕರಮಚಂದ ಯಾರು? ನನ್ಗೆ ಅವರ್ ಜೊತೆ ತುಸು ಖಾಸಗಿಯಾಗಿ ಮಾತಾಡೋದಿತ್ತು." ಕುರ್ಚಿಯಲ್ಲಿ ಕುಳಿತುಕೊಳ್ಳುತ್ತಾ ಕುಟ್ಟಯ್ಯ ಪೀಠಿಕೆ ಹಾಕಿದ.

"ನಾನು ಕರಮಚಂದ. ಇವ್ನು ಪ್ರಸಾದ್ ಬಿದ್ದಪ್ಪ. ನೀವು ಧಾರಾಳವಾಗಿ ಮಾತಾಡಬಹುದು. ಹೇಳಿ ನನ್ನಿಂದೇನಾಗಬೇಕು?"

"ಅಂತಹಾ ಗಂಭೀರವಾದದ್ದೇನೂ ಅಲ್ಲ. ನಮ್ ಎಸ್ಟೇಟ್‌ನ ಕೂಲಿಯೊಬ್ಬ ಒಂದ್ ವಾರದಿಂದ ನಾಪತ್ತೆಯಾಗಿದ್ದಾನೆ. ಒಳ್ಳೇ ಕೆಲ್ಸಗಾರ. ಆದ್ರೆ ಮಹಾ ಕುಡುಕ. ಅವ್ನು ಇಲ್ದೇ ಇದ್ದುದರಿಂದ ನನ್ಗೇನೂ ತೊಂದ್ರೆಯಾಗಿಲ್ಲ. ಆದ್ರೂ ಬರೀ ಕುತೂಹಲ ತಣಿಸುವ ಉದ್ದೇಶ ಅಷ್ಟೇ. ನೀವು ಸಹಾಯ ಮಾಡಬಲ್ಲಿರಾ?"

"ಖಂಡಿತಾ, ವಿವರ ತಿಳ್ಸಿ."

"ರುದ್ರಮುನಿ ಅನ್ನೋದು ಅವ್ನ ಹೆಸರು. ಅವ್ನು ಎಲ್ಲಿಂದ ಬಂದ, ಅವ್ನ ಪೂರ್ವಾಪರ ಏನೂ ನನ್ಗೆ ಗೊತ್ತಿಲ್ಲ. ನನ್ಗೆ ತಿಳಿದಂತೆ ಆತನಿಗೆ ಸಂಬಂಧಿಕರಾರು ಇದ್ದಂತಿಲ್ಲ. ಅವ್ನಿಗೆ ಕುಡಿತದ ಚಟ. ಆದ್ರೆ ಕುಡಿದೇ ಇದ್ದಾಗ ಒಳ್ಳೇ ಕೆಲಸಗಾರ. ಸಂಜೆ ಮೇಲೆ ಆತನನ್ನು ಮಾತಾಡಿಸುವಂತಿಲ್ಲ. ಆದ್ರೆ ಕಳೆದ ಒಂದೂವರೆ ತಿಂಗಳಿಂದ ಅವನ ನಡವಳಿಕೆಯಲ್ಲಿ ನಾನು ಬದಲಾವಣೆ ಗುರುತಿಸಿದೆ. ಯಾವಾಗ್ಲೂ ಬೆಳಿಗ್ಗೆ ಎಂಟಕ್ಕೆಲ್ಲಾ ಕೆಲ್ಸಕ್ಕೆ ಹಾಜರಾಗ್ತಾ ಇದ್ದೋನು ಹತ್ತಾದ್ರೂ ಬರ್ತಾ ಇರಲಿಲ್ಲ. ಬಂದ ಮೇಲೂ ಸರಿಯಾಗಿ ಕೆಲ್ಸ ಮಾಡ್ತಿರಲಿಲ್ಲ. ವಿಚಾರಿಸಿದ್ರೆ ಹಾರಿಕೆ ಉತ್ತರ ಕೊಡ್ತಿದ್ದ. ನಾನು ಅವ್ನ ಮಿತ್ರ ಚೆನ್ನಪ್ಪನಲ್ಲಿ ವಿಚಾರಿಸಿದಾಗ ಒಂದು ವಿಚಿತ್ರ ಸಂಗ್ತಿ ಗೊತ್ತಾಯ್ತು. ರುದ್ರಮುನಿ ದಿನಾ ಸಂಜೆ ಚೆನ್ನಪ್ಪನ ಬೈಕ್ ತೆಗೆದುಕೊಂಡು ಕುಡಿಲೀಕ್ಕೆ ಹೋಗ್ತಿದ್ದನಂತೆ! ಯಾರೋ ಒಬ್ಬ ಉಚಿತವಾಗಿ ಕುಡಿಸ್ತಾ ಇದ್ದನಂತೆ!! ಜೊತೆಗೆ ತಿನ್ನೋಕೆ ಕೂಡಾ!! ಬಿಟ್ಟಿ ಊಟ ಸಿಕ್ಕಿದ್ರೆ ಕೆಲ್ಸ ಯಾರು ಮಾಡ್ತಾರೆ? ನಾನು ಅವ್ನಿಗೆ ಒಂದೆರೆಡು ಸಲ ಗದರಿಸಿದೆ. ಆದ್ರೆ ಏನೂ ಪ್ರಯೋಜನವಾಗ್ಲಿಲ್ಲ. ಆದ್ರೆ ಕಳೆದ ಒಂದು ವಾರದಿಂದ ಆತನ ಪತ್ತೆಯೇ ಇಲ್ಲ..."

"ಅವ್ನು ಕುಡಿಲಿಕ್ಕೆ ಎಲ್ಲಿಗೆ ಹೋಗ್ತಾ ಇದ್ದ ಅಂತ ಗೊತ್ತೇನು?" ನನಗೆ ಆ ಜಾಹೀರಾತು